**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**

**ದಿಃ 01.02.2025 ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟಿ ಸವಾಲುಃ ಎರಡನೇ ಎದುರುದಾರ ಪರ ವಕೀಲರಿಂದಃ**

ರೋಗಿಯನ್ನು ತಪಾಸಣೆ ಮಾಡಿ, ಅಂಗನ್ಯೂನ್ಯತೆಯ ಪ್ರಮಾಣವನ್ನು ನಿಪಿ.16 ರಲ್ಲಿ ನಮೂದಿಸಿದ್ದೇನೆ. ರೋಗಿ ಹೇಳಿದ ತೊಂದರೆಗಳನ್ನು ಆಧಾರಿಸಿ, ನ್ಯೂನ್ಯತೆ ಪ್ರಮಾಣವನ್ನು ನಿಗದಿಪಡಿಸುತ್ತೀರಿ ಎಂದರೆ ಸರಿಯಲ್ಲ. ರೋಗಿಯ ಹೇಳಿದ ತೊಂದರೆಗಳ ಆಧಾರದ ಮೇಲೆ ಅವರನ್ನು ಪರೀಕ್ಷಿಸುತ್ತೀರಿ ಎಂದರೆ ಸರಿಯಲ್ಲ, ಸಾಕ್ಷಿ ಸಾಮಾನ್ಯವಾಗಿ ನಾವು ಅಂಗದ ಚಲನವಲನ, ಸಾಮರ್ಥ್ಯ, ಚಟುವಟಿಕೆಗಳನ್ನು ಪರೀಕ್ಷಿಸುತ್ತೇವೆ ಎನ್ನುತ್ತಾರೆ. ನಾನು ನ್ಯೂನ್ಯತೆಗಳನ್ನು ಅರ್ಜಿದಾರರಿಗೆ ಚಿಕಿತ್ಸೆ ನೀಡಿಲ್ಲ. ರೋಗಿ ಹೇಳಿದ ತೊಂದರೆಗಳನ್ನು ಪರಿಗಣಿಸಿ ಅವರನ್ನು ತಪಾಸಣೆಗೆ ಒಳಪಡಿಸಿ, ನ್ಯೂನ್ಯತೆ ಇದ್ದಲ್ಲಿ ಅದರ ಪ್ರಮಾಣವನ್ನು ನಮೂದಿಸುತ್ತೇವೆ. ಅರ್ಜಿದಾರರ ಗಾಯ ಪ್ರಮಾಣ ಪತ್ರ, ಡಿಸಚಾರ್ಜ ಸಮ್ಮರಿಯನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ನೋಡಿಲ್ಲ. ಪ್ರಮಾಣ ಪತ್ರದ 3 ನೇ ಕಂಡಿಕೆಯಲ್ಲಿ ನಮೂದಿಸಿರುವ ಮೂಳೆ ಮುರಿತದ ವಿವರಗಳನ್ನು ಡಿಸಚಾರ್ಜ ಸಮ್ಮರಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸದರಿ ಮೂಳೆ ಮುರಿತ ಆಗದಿದ್ದರು ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರಮಾಣ ಪತ್ರದ ಕಂಡಿಕೆ 8 ರಲ್ಲಿ ನಮೂದಿಸಿರುವುದು ದೈಹಿಕ ನ್ಯೂನ್ಯತೆ ಮಾತ್ರ. ಸರಕಾರದ 2018 ನೇ ನೋಟಿಫಿಕೇಶನ್ ಆಧರಿಸಿ ನ್ಯೂನ್ಯತೆ ನಮೂದಿಸುತ್ತೇವೆ. ದೈಹಿಕ ನ್ಯೂನ್ಯತೆ ಪ್ರಮಾಣ ನಿಗದಿಪಡಿಸುವ ಪೂರ್ವದಲ್ಲಿ ರೋಗಿಗೆ ಕೆಲ ತಪಾಸಣೆಗಾಗಿ ಸಲಹೆ ನೀಡುತ್ತೇವೆ. ಅರ್ಜಿದಾರರಿಗೆ ಎಕ್ಸರೇ ಮಾಡಿಸುವಂತೆ ಸಲಹೆ ನೀಡಿದ್ದೇವೆ. ನಿಪಿ.17 ರಲ್ಲಿ ಮೂಳೆ ಮುರಿತ ಕಾಣುತ್ತಿಲ್ಲ ಎಂದರೆ ಸಾಕ್ಷಿ, ಮೂಳೆ ಮುರಿತ ಕೂಡಿಕೊಂಡಿದೆ ಎನ್ನುತ್ತಾರೆ. ನಿಪಿ.17 ರಲ್ಲಿ ಮೂಳೆ ಮುರಿತ ಕಾಣುತ್ತಿಲ್ಲದ ಕಾರಣ, ದೈಹಿಕ ನ್ಯೂನ್ಯತೆಯ ಪ್ರಮಾಣವನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಆಗದಿದ್ದ ಕಾರಣ, ಗಾಯದ ಗುರುತುಗಳು ಇಲ್ಲದ ಕಾರಣ, ಅಂಗನ್ಯೂನ್ಯತೆಯ ಪ್ರಮಾಣ ನೀಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದಿದ್ದರು ಸಹ ಶೇ.36%ರಷ್ಟು ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೆ ತೊಂದರೆ ಇಲ್ಲದಿದ್ದರು ಸಹ ನಿಪಿ.16ನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಅರ್ಜಿದಾರರು ಅಪ್ರಾಪ್ತ ವಯಸ್ಸಿನವರಾಗಿದ್ದು, ಪ್ರಾಪ್ತ ವಯಸ್ಸಿಗೆ ಬರುವ ಹೊತ್ತಿಗೆ ಮೂಳೆಗಳು ಬಲಗೊಂಡು, ಯಾವುದೆ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.